ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜು ಅರಸು ಟಮಕ ಕೋಲಾರ

ಇಮೇಲ್: **bnuregistrar@karnataka.gov.in**

ನಂ:ಬೆಂ.ಉ.ವಿ.ವಿ/ ಅತಿಥಿ ಉಪನ್ಯಾಸಕರ ನೇಮಕಾತಿ/1248/ 2024-25 ದಿನಾಂಕ:26.09.2024

## ಅಧಿಸೂಚನೆ:

**ವಿಷಯ:** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ 2024-2025 ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: **26.09.2024**

******

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಮಂಗಸಂದ್ರ ಮತ್ತು ಆಡಳಿತ ಭವನದಲ್ಲಿನ ವಿವಿಧ ಸ್ನಾತಕೋತ್ತರ ವಿಭಾಗಗಳ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ 2024-25ನೇ ಶೈಕ್ಷಣಿಕ ಸಾಲಿಗೆ ಯು.ಜಿ.ಸಿ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಈ ಕೆಳಕಂಡ ವಿಷಯಗಳ ಬೋಧನಾ ಕಾರ್ಯಭಾರಕ್ಕೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ಹುದ್ದೆಗಳ ವಿವರ**

| ಕ್ರ.ಸಂಖ್ಯೆ | ವಿಷಯವಾರು ಸ್ನಾತಕೋತ್ತರ ವಿಭಾಗಗಳು | ಪೂರ್ಣಕಾಲಿಕ ಹುದ್ದೆಗಳ ಸಂಖ್ಯೆ | ಅರೆಕಾಲಿಕ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|
| **01** | ಕನ್ನಡ | **03** | **01** | **04** |
| **02** | ಆಂಗ್ಲಭಾಷೆ | **03** | **-** | **03** |
| **03** | ಅರ್ಥಶಾಸ್ತ್ರ | **03** | **-** | **03** |
| **04** | ರಾಜ್ಯ ಶಾಸ್ತ್ರ | **02** | **02** | **04** |
| **05** | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | **04** | **01** | **05** |
| **06** | ಸಮಾಜ ಕಾರ್ಯ | **05** | **-** | **05** |
| **07** | ವಾಣಿಜ್ಯ ಶಾಸ್ತ್ರ | **04** | **-** | **04** |

| | | | | |
|---|---|---|---|---|
| 08 | ಸಸ್ಯಶಾಸ್ತ್ರ | 07 | 01 | 08 |
| 09 | ಗಣಕ ವಿಜ್ಞಾನ | 04 | 01 | 05 |
| 10 | ಭೌತ ಶಾಸ್ತ್ರ | 06 | - | 06 |
| 11 | ಗಣಿತಶಾಸ್ತ್ರ | 04 | - | 04 |
| 12 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 03 | 02 | 05 |
| 13 | ರಸಾಯನ ಶಾಸ್ತ್ರ | 08 | - | 08 |
| 14 | ಬಿ.ಇಡಿ | 06 | - | 06 |
| 15 | ಎಂ.ಎ ಎಜುಕೇಷನ್ | 03 | - | 03 |

ಅಭ್ಯರ್ಥಿಗಳು ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ **ಪಿ.ಹೆಚ್.ಡಿ/ಎನ್.ಇ.ಟಿ./ಎಸ್.ಎಲ್.ಇ.ಟಿ.** ಹೊಂದಿರಬೇಕಾಗುತ್ತದೆ ಅಲ್ಲದೆ, ಅರ್ಹ ಅಭ್ಯರ್ಥಿಗಳು **ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ(www.bnu.karnataka.gov.in) ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ತಮ್ಮ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ, ಸೇವಾನುಭವ ಪತ್ರ, ಪಿ.ಹೆಚ್.ಡಿ/ಎನ್.ಇ.ಟಿ./ಎಸ್.ಎಲ್.ಇ.ಟಿ. ಪ್ರಮಾಣಪತ್ರ, ಸಂಶೋಧನ ಪ್ರಕಟಣೆಗಳ ಪತ್ರಿಕೆಗಳು ಇತ್ಯಾದಿ ಅಗತ್ಯ ದಾಖಲಾತಿಗಳೊಂದಿಗೆ (ದ್ವಿಪ್ರತಿಗಳಲ್ಲಿ) ಕುಲಸಚಿವರು, ವಿಶ್ವವಿದ್ಯಾಲಯದ ಆಡಳಿತ ಕಛೇರಿ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ.-563103 ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಲಾಗಿದೆ.**

**ಅರ್ಜಿ ಸಲ್ಲಿಕೆಯ ಪ್ರಾರಂಭದ ದಿನಾಂಕ: 28.09.202**

ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ: **07.10.2024** ರ ಸಂಜೆ: 5.30 ಗಂಟೆಯ ಒಳಗೆ ಸಲ್ಲಿಸತಕ್ಕದ್ದು. **(ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ).**

**ಸೂಚನೆ:**

1. **ಯು.ಜಿ.ಸಿ ನಿಯಾಮಾವಳಿ 2018 ತಿದ್ದುಪಡಿ ಅಧಿಸೂಚನೆ ದಿನಾಂಕ:30.06.2023ರ ಪ್ರಕಾರ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ನೇಮಕಾತಿ ಹೊಂದಲು NET/SLET ಕನಿಷ್ಠ ಮಾನದಂಡವನ್ನು ಹೊಂದಿರಬೇಕು.**

2. ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿರುತ್ತವೆ. ಹಾಗೂ ಅಶಿಸ್ತು ದುರ್ವತನೆಗಳು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ಇಲ್ಲಿನ ನೇಮಕಾತಿಯ ಆಹ್ವಾನವನ್ನು ರದ್ದುಗೊಳಿಸಲಾಗುವುದು.

3. ಈ ಅತಿಥಿ ಉಪನ್ಯಾಸಕರ ನೇಮಕಾತಿಯು ಖಾಯಂ ಉಪನ್ಯಾಸಕರ ನೇಮಕಾತಿ ಆಗುವವರೆಗೆ ಅಥವಾ 2024-25ನೇಶೈಕ್ಷಣಿಕ ಅವಧಿವರೆಗೆ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರಿಗೆ ಅನ್ವಯಿಸುವುದು.

4. ಆಯ್ಕೆಯಾದ ಅತಿಥಿ ಉಪನ್ಯಾಸಕರಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಈ ಕೆಳಕಂಡಂತೆ ಪಾವತಿಸಲಾಗುವುದು.

| | |
|---|---|
| ಅ) NET/SLET/Ph.D ಹೊಂದಿರುವ ಪೂರ್ಣ ಅವಧಿ ಅತಿಥಿ ಉಪನ್ಯಾಸಕರಿಗೆ (ವಾರಕ್ಕೆ 16 ಗಂಟೆಗಳು ಗರಿಷ್ಠ 64 ಗಂಟೆಗಳು ತಿಂಗಳಿಗೆ. | ಪ್ರತಿ ಗಂಟೆಗೆ 780/- ಗರಿಷ್ಠ ರೂ. 49,920/- |
| ಆ) NET/SLET/Ph.D ಇಲ್ಲದಿರುವ (ವಾರಕ್ಕೆ 16 ಗರಿಷ್ಠ 64 ಗಂಟೆಗಳು | ಪ್ರತಿ ಗಂಟೆಗೆ 680/- ಗರಿಷ್ಠ ರೂ. 43,520/- |
| ಇ) ಉಳಿದ ಅರೆಕಾಲಿಕ ಅತಿಥಿ ಉಪನ್ಯಾಸಕರು:<br>i). NET/SLET/Ph.D ಹೊಂದಿರುವ<br>ii) .NET/SLET/Ph.D ಇಲ್ಲದಿರುವವರಿಗೆ | ಪ್ರತಿ ಗಂಟೆಗೆ 780/- ಗರಿಷ್ಠ ರೂ. 680/- |

5. ವಿವಿಧ ವಿಷಯಗಳ ಕಾರ್ಯಭಾರ ಮತ್ತು ಅಗತ್ಯಕ್ಕೆ ಅನುಗುಣವಾಗಿ ಹಾಗೂ ಸದ್ಯದಲ್ಲಿ ಜಾರಿಯಲ್ಲಿರುವ ಸರ್ಕಾರದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುವುದು.

6. ಮಿಂಚಂಚೆ ಮೂಲಕ ಕಳುಹಿಸಿಕೊಡುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಅಭ್ಯರ್ಥಿಗಳು ಸಂದರ್ಶನದ ದಿನಾಂಕ ಮತ್ತು ಇತರೆ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್ ಸೈಟ್:www.bnu.karnataka.gov.in ನಿಂದ ಪಡೆಯುವುದು.

ಕುಲಸಚಿವರು

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ, ಕರ್ನಾಟಕ-563 103

ಪ್ರತಿಗಳು:

1. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಗಸಂದ್ರ. ಕೋಲಾರ-563103. (ಮಾಹಿತಿಗಾಗಿ ಮತ್ತು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಿದೆ).
2. ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.
3. ಆಪ್ತ ಕಾರ್ಯಾಲಯ, ಕುಲಸಚಿವರು (ಮೌ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
4. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.
5. ವೆಬ್‌ಸೈಟ್ ಪ್ರತಿ.
6. ಕಛೇರಿ ಪ್ರತಿ.